International Journal of Kannada Research 2021; 7(2): 171-173

International Journal of Kannada Research
www.kannadajournal.com

**ISSN: 2454–5813**
IJKR 2021; 7(2): 171-173
© 2021 IJKR
www.kannadajournal.com
Received: 10-02-2021
Accepted: 12-03-2021

**ಡಾ. ಜಿ.ಈ.ಅಜ್ಜಪ್ಪ**
ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ

**Corresponding Author:**
**ಡಾ. ಜಿ.ಈ.ಅಜ್ಜಪ್ಪ**
ಸಹಾಯಕ ಪ್ರಾಧ್ಯಾಪಕ
ಸರ್ಕಾರಿ ಕಲಾ ಕಾಲೇಜು
(ಸ್ವಾಯತ್ತ), ಚಿತ್ರದುರ್ಗ

# ಯಶೋಧರ ಚರಿತೆಯ ಸಮಕಾಲೀನ ಸಾಂಸ್ಕೃತಿಕ ವಿಚಾರಗಳು

**ಡಾ. ಜಿ.ಈ.ಅಜ್ಜಪ್ಪ**

**ಸಾರಾಂಶ**
ಯಾವುದೇ ಸಾಹಿತ್ಯ ಕೃತಿಯಲ್ಲಿ ಅದು ರಚನೆಯಾದ ಕಾಲದ ಸಮಕಾಲೀನ ಸಾಂಸ್ಕೃತಿಕ ವಿಚಾರಗಳು ಇರುತ್ತವೆಂಬುದು ತಿಳಿದಿರುವ ವಿಚಾರವಾಗಿದೆ. ಈ ಹಿನ್ನೆಲೆಯಲ್ಲಿ ಜನ್ನ ಕವಿಯ ಯಶೋಧರ ಚರಿತೆಯಲ್ಲಿ ಕಾಣುವ ಸಮಕಾಲೀನ ವಿಚಾರಗಳನ್ನು ನಾನಿಲ್ಲಿ ಪ್ರಸ್ತಾಪಿಸುತ್ತೇನೆ. ಸಮಕಾಲೀನ ವಿಚಾರಗಳಲ್ಲಿ ಮುಖ್ಯವಾಗಿ ಸಾಂಸ್ಕೃತಿಕ ಹಿನ್ನೆಲೆಯ ವಿಚಾರಗಳನ್ನು ಇಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

ಜನ್ನ ಕವಿಯ ಕಾಲದ ಸಾಂಸ್ಕೃತಿಕ ವಾತಾವರಣವನ್ನು ನೋಡುವುದಾದರೆ ಅವನ ಕಾಲ ಕ್ರಿ.ಶ. ಹದಿಮೂರನೆಯ ಶತಮಾನದ ಆದಿಭಾಗ (ಯಶೋಧರ ಚರಿತೆಯ ರಚನೆಯ ಕಾಲ 1209) ಈ ವೇಳೆಗಾಗಲೇ ಕನ್ನಡ ನಾಡಿನಲ್ಲಿ ವಚನಕಾರರು ಬಂದು ಹೋಗಿದ್ದರು. ಹರಿಹರ ಮುಂತಾದ ಕವಿಗಳು ತಮ್ಮ ಕೃತಿಗಳ ಮೂಲಕ ವೀರಶೈವ ಧರ್ಮದ ಅಸ್ತಿತ್ವವನ್ನು ಗಟ್ಟಿಗೊಳಿಸುತ್ತಿದ್ದರು. ಪಂಪನ ಕಾಲದಲ್ಲಿ ಪ್ರಬಲವಾಗಿದ್ದ ಜೈನಧರ್ಮದ ಬೇರುಗಳು ಜನ್ನನ ಕಾಲಕ್ಕಾಗಲೇ ನಾನಾ ಕಾರಣಗಳಿಂದ ಸಡಿಲಗೊಳ್ಳತೊಡಗಿದ್ದವು. ಇಂತಹ ಸಂದರ್ಭದಲ್ಲಿ ಜೈನಧರ್ಮದ ಅಸ್ತಿತ್ವವನ್ನು ಗಟ್ಟಿಗೊಳಿಸಬೇಕಾದದ್ದು ಜನ್ನ ಕವಿಯ ಮೇಲಿದ್ದ ಜವಾಬ್ದಾರಿಯಾಗಿತ್ತು. ಆದ್ದರಿಂದ ಜನ್ನ ಕವಿ ಪಂಪ ಹಾಕಿ ಕೊಟ್ಟ ಧಾರ್ಮಿಕ, ಲೌಕಿಕ ಕಾವ್ಯ ಪರಂಪರೆಯನ್ನು ಬಿಟ್ಟು ಎರಡೂ ಧಾರ್ಮಿಕ ಕಾವ್ಯಗಳನ್ನೇ ಬರೆದಿದ್ದಾನೆ. ಅನಂತನಾಥ ಪುರಾಣ ಸಾಂಪ್ರದಾಯಿಕ ಜೈನ ಕಾವ್ಯವಾಗಿದ್ದರೆ ಯಶೋಧರ ಚರಿತೆ ಧಾರ್ಮಿಕ ಕಾವ್ಯದಂತೆ ಕಂಡರೂ ವಸ್ತುವಿಗೊಂದು ಲೌಕಿಕವಾದ ಬದಿ ಇದ್ದರೂ ಕವಿಯಿಂದ ಅದು ಧಾರ್ಮಿಕ ಕಾವ್ಯವೆಂದು ನಿಸ್ಸಂದೇಹವಾಗಿ ಉದ್ದಿಷ್ಟವಾಗಿದೆ.

ಪಂಪ ಮುಂತಾದ ಕವಿಗಳು ಸಂಸ್ಕೃತ ಭೂಯಿಷ್ಠ ಚಂಪೂ ಕಾವ್ಯಗಳನ್ನು ಬರೆದರೆ ಜನ್ನ ತನ್ನ ಯಶೋಧರ ಚರಿತೆಯನ್ನು ಕನ್ನಡ–ಸಂಸ್ಕೃತಗಳ ಮಧುರ ಮೈತ್ರಿಯ ಶೈಲಿಯಿಂದ ಕಂದ ಪದ್ಯಗಳಲ್ಲಿ ಬರೆದಿದ್ದಾನೆ. ಇದಕ್ಕೆ ಆ ಕಾಲದ ಸಾಂಸ್ಕೃತಿಕ ನೆಲೆ ಮುಖ್ಯವೆಂದು ಹೇಳಬಹುದು. ಸರಳ ಭಾಷೆಯ ಮೂಲಕ ವಚನಕಾರರು ಹರಿಹರ ಮುಂತಾದವರು ಧಾರ್ಮಿಕ ವಿಚಾರಗಳನ್ನು ಹೇಳಿದ್ದರು. ಇದನ್ನು ಗಮನಿಸಿದ ಜನ್ನನೂ ಜನರಿಗೆ ಅರ್ಥವಾಗುವ ಸರಳ ಭಾಷೆಯನ್ನು ಬಳಸಿ ಕಂದ ಪದ್ಯಗಳೇ ಪ್ರಧಾನವಾದ ಚಂಪೂ ಕಾವ್ಯವಾದ ಯಶೋಧರ ಚರಿತೆಯನ್ನು ರಚಿಸಿದ್ದಾನೆ. ಧಾರ್ಮಿಕ ವಿಚಾರಗಳನ್ನು ವಚನಕಾರರಂತೆ, ವೀರಶೈವ ಕವಿಗಳಂತೆ ಸರಳವಾಗಿ ಜನರಿಗೆ ತಲುಪಿಸಿದರೆ ಜನರು ಧರ್ಮಾನುಯಾಯಿಗಳಾಗುತ್ತಾರೆಂಬ ನಂಬಿಕೆಯಿಂದ ಜನ್ನ ಕವಿ ಹೀಗೆ ಮಾಡಿರಬಹುದು.

ಕರ್ಮತತ್ವದ ಹಿನ್ನೆಲೆಯಲ್ಲಿ ಹಿಂಸೆಯ ದುರಂತ ಘೋರ ಪರಿಣಾಮವನ್ನು ಬಿತ್ತರಿಸಿ ತನ್ಮೂಲಕ ಅಹಿಂಸೆಯ ಪಮತಿಯನ್ನು ಎತ್ತಿ ಹಿಡಿಯುವ ಉದ್ದೇಶ ಇಲ್ಲಿದೆ. ಜೈನಧರ್ಮದಲ್ಲಿ ಅಹಿಂಸೆಗೆ ಪರಮ ಪ್ರಾಶಸ್ತ್ಯ. ಜೀವದಯೆ ಜೈನಧರ್ಮ ಎಂಬುದನ್ನು ಉದ್ಘೋಷಿಸಲು ಹೊರಟ ಕೃತಿ ಯಶೋಧರ ಚರಿತೆ. ಅಹಿಂಸೆಯ ಮುಂದೆ ಹಿಂಸೆಯ ಪರಾಭವ ಅನಿವಾರ್ಯ ಎಂಬುದನ್ನು ಮನಗಾಣಿಸುತ್ತದೆ ಈ ಕಾವ್ಯ.

ಈ ಸಂಸಾರ ನಿಸ್ಸಾರ, ವೈರಾಗ್ಯವೇ ಜೀವನದ ಪರಮಮಾರ್ಗ ಎಂಬುದನ್ನು ಹೆಜ್ಜೆಹೆಜ್ಜೆಗೂ ಒತ್ತಿ ಹೇಳುವುದು ಜನ್ನ ಕವಿಯ ಉದ್ದೇಶ. ಆದ್ದರಿಂದಲೇ ಪ್ರತಿ ಅವತಾರದ ಕೊನೆಯಲ್ಲಿ 'ಅಭಯರುಚಿಕುಮಾರಂ ಮಾರಿದತ್ತಂಗೆ ಹಿಂಸಾರಭಸಮತಿಗೆ ಸಯ್ಪಿಂ ಪೇಳ್ದ ಧರ್ಮಕ್ಕೆ ಸಂದೀ ಶುಭಕಥನಂ' ಎಂದು ಉಕ್ತವಾಗಿದೆ. ಯಶೋಧರನ ಕತೆಯನ್ನು ಕೇಳಿದವರ ಪಾಪ ಅಳಿಯುವುದೆಂದೇ ಹೇಳುತ್ತಾನೆ ಕವಿ. ಧರ್ಮದಿಂದಾಗದುದೇಂ ಎಂದು ಅವನು ವಾಚ್ಯವಾಗಿಯೇ ಪ್ರಶ್ನಿಸುತ್ತಾನೆ. ಜನ್ನನ

ಯಶೋಧರ ಚರಿತೆ ಸಂಸ್ಕೃತದ ವಾದಿರಾಜರ ಕೃತಿ ಯಶೋಧರ ಚರಿತೆಯ ಕನ್ನಡದ ಕತೆಯಾದರೂ ದೇಶೀಯ ಆವರಣ ಅದರಲ್ಲಿ ತುಂಬಿದೆ.
ಜೈನಯತಿಗಳಾದ ಸುದತ್ತಾಚಾರ್ಯರು ಐದುನೂರು ಜನ ಶಿಷ್ಯರೊಂದಿಗೆ ಗಮನ ಪ್ರಾಯಶ್ಚಿತಕ್ಕಾಗಿ ರಾಜಪುರವೆಂಬ ನಗರದ ಉಪವನ ಸೇರುವುದು, ಮಾರಿಗೆ ಮನುಷ್ಯ ಬಲಿ ಕೊಡುವುದು, ಮಾರಿಗೆ ವಿವಿಧ ರೀತಿಯ ಹರಕೆ ತೀರಿಸುವುದು. ಅಮಂಗಳ ಕನಸಿನ ಪರಿಹಾರಕ್ಕೆ ದೇವಿಗೆ ಬಲಿ ಕೊಟ್ಟರೆ ಅಮಂಗಳ ಪರಿಹಾರವಾಗುತ್ತದೆ ಎಂಬ ಚಂದ್ರಮತಿಯ ನಂಬಿಕೆ. ಬಲಿಕೊಡಲು ಇಷ್ಟವಿಲ್ಲದಿದ್ದಾಗ ಸಂಕಲ್ಪ ಹಿಂಸೆ, ತಿಥಿಯ ಆಚರಣೆ. ಬ್ರಾಹ್ಮಣರು ತಿಥಿ ಊಟ ಮಾಡಿ ಹರಸುವುದು ಹೀಗೆ ಅನೇಕ ವಿಚಾರಗಳು ಜನ್ನನ ಕಾಲದ ಸಾಂಸ್ಕೃತಿಕ ವಿಚಾರಗಳು ಕಾವ್ಯದಲ್ಲಿ ಕಾವ್ಯದ ಉದ್ದೇಶ ಸಾಧನೆಗಾಗಿ ಬಂದಿವೆ. ವಾದಿರಾಜನ ಕಾವ್ಯದಲ್ಲಿಲ್ಲದ ಅನೇಕ ವಿಚಾರಗಳು ಇಲ್ಲಿ ಬಂದಿರುವುದರಿಂದ ಇವುಗಳನ್ನು ಸಮಕಾಲೀನ ಸಾಂಸ್ಕೃತಿಕ ವಿಚಾರಗಳೆಂದು ಗುರುತಿಸಿ ವಿಶ್ಲೇಷಣೆ ಮಾಡುತ್ತಿದ್ದೇನೆ.

**ಜೈನಯತಿಗಳು ಊರಿಂದೂರಿಗೆ ಯಾತ್ರೆ ಹೋಗುತ್ತಿದ್ದ ವಿವರಣೆ ಇಲ್ಲಿದೆ.**

ಇತ್ತಲ್‌ಬಳಿಕ್ಕೆಪಂಚ ಶ
ತೋತ್ತಮ ಯತಿಸಮಿತಿವೆರಸು ಗಮನಪ್ರಾಯ
ಶ್ಚಿತ್ತ ನಿಮಿತ್ತಂ ಬಂದು ಸು
ದತ್ತಾಚಾರ್ಯರ್ ಪುರೋಪವನಮಂ ಸಾರ್ದರ್॥

ಜೈನಧರ್ಮದಲ್ಲಿ ಯತಿ ದೀಕ್ಷೆಯನ್ನು ಪಡೆದ ನಂತರ ಅವರು ಒಂದು ಕಡೆ ನಿಲ್ಲದೆ ಧರ್ಮ ಪ್ರಚಾರ ಮಾಡುತ್ತ ಊರಿಂದೂರಿಗೆ ತೆರಳಿ ಆಯಾ ಊರಿನ, ಪಟ್ಟಣದ, ನಗರದ ಉಪವನಗಳಲ್ಲಿ ತಂಗಿ ಊರಿನ ಜನರು ಕೊಟ್ಟ ಭಿಕ್ಷೆಯ ಆಹಾರವನ್ನು ತಿಂದು ಜೀವಿಸುತ್ತಿದ್ದ ವಿಚಾರ ಇಲ್ಲಿ ಕಾಣಬರುತ್ತದೆ. ಇಲ್ಲಿ ಸುದತ್ತಾಚಾರ್ಯರೆಂಬ ಯತಿಗಳು ಐದುನೂರು ಜನ ಶಿಷ್ಯರ ಗುಂಪಿನೊಂದಿಗೆ ಬಂದು ಆ ಊರಿನ ಉಪವನವನ್ನು ಸೇರಿದರು. ಕನ್ನಡದ ಮೊದಲ ಗದ್ಯಕೃತಿ ವಡ್ಡಾರಾಧನೆಯಲ್ಲಿಯೂ ಸೂರ್ಯಮಿತ್ರಾಚಾರ್ಯರು, ಅಗ್ನಿಭೂತಿ, ಕಾರ್ತಿಕ ಋಷಿ ಮುಂತಾದವರು ಊರಿಂದೂರಿಗೆ ಹೋಗುತ್ತಿದ್ದ ವಿವರಣೆ ಇದೆ. ಇನ್ನೂ ಅನೇಕ ಕನ್ನಡದ ಕೃತಿಗಳಲ್ಲಿ ಈ ವಿವರಣೆ ಇದೆ. ಹಾಗಾಗಿ ಇದನ್ನು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಗುರುತಿಸಬಹುದು.

**ಮಾರಿಗೆ ಮನುಷ್ಯ ಬಲಿಕೊಡುವುದು**

ನರಬಲಿಯ ವಿಚಾರ ನಮ್ಮ ಪುರಾಣ ಕಾವ್ಯಗಳಲ್ಲಿ ಉಲ್ಲೇಖಿತವಾಗಿದೆ. ಯಶೋಧರ ಚರಿತೆಯಲ್ಲಿಯೂ ಇದರ ಉಲ್ಲೇಖವಿದೆ.

ನಿಂದು ನರಪತಿ ತಳಾ ರಂ
ಗೆಂದಂ ನೀಂ ಬರಿಸು ಮನುಜಯುಗಮಂ ಮುನ್ನಂ
ಕೊಂದರ್ಚಿಸುವೆಂ ಪೂಜೆಯೊ
ಳೆಂದಿನ ಪರಿತಪ್ಪೆ ದೇವಿ ತಪ್ಪದೆ ಮಾಣಳ್॥

ರಾಜ ಮಾರಿದತ್ತನು ಮನುಷ್ಯ ಜೋಡಿಯನ್ನು ಕರೆ ತರಲು ತನ್ನ ತಳಾರನಿಗೆ ಹೇಳುತ್ತಾನೆ. ಮನುಷ್ಯ ಜೋಡಿಯನ್ನು ಮೊದಲು ಬಲಿಕೊಟ್ಟು ನಂತರ ದೇವಿಯನ್ನು ಪೂಜಿಸುವೆನು. ಈ ಪೂಜೆಯ ಪದ್ಧತಿ ಹಿಂದಿನಿಂದಿಲೂ ನಡೆದುಕೊಂಡು ಬಂದಿದೆ. ತಪ್ಪಿದರೆ ದೇವಿ ಕೆಡುಕು ಮಾಡದಿರುವುದಿಲ್ಲ ಎಂಬ ಮಾತು ಅಂದಿನ ಕಾಲದಲ್ಲಿ ಮನುಷ್ಯ ಬಲಿ ಕೊಡುತ್ತಿದ್ದ ಸಂಸ್ಕೃತಿಯನ್ನು ಹೇಳುತ್ತದೆ. ಬಲಿಕೊಡದಿದ್ದರೆ ದೇವಿ ಮುನಿದು ಕೆಡುಕು ಮಾಡುವಳೆಂಬ ನಂಬಿಕೆ ಸ್ವತಃ ರಾಜ ಮಾರಿದತ್ತನಲ್ಲಿಯೇ ಇದೆ.

ಮಾರಿಯ ಭಕ್ತರು ಮಾರಿಗೆ ವಿವಿಧ ರೀತಿಯ ಹರಕೆ ತೀರಿಸುವುದು.
ಸುರಗಿರಿದರ್ಚನೆಯಾಡುವ
ಪರಕೆಯನೊಪ್ಪಿಸುವ ಲಕ್ಕಲೆಕ್ಕದ ಲೆಂಕ
ವೆರಸು ಬಲವಂದು ದೇವಿಯ
ಚರಣಂಗಳ್ಗೆರಗಿ ರಂಗಮಂಟಪದೆಡೆಯೊಳ್॥

ಮನುಷ್ಯ ಬಲಿಕೊಡುವುದು ಒಂದು ವಿಧವಾದರೆ ಸಾಮಾನ್ಯ ಜನರು ದೇವಿಗೆ ಹರಕೆಯನ್ನು ಒಪ್ಪಿಸುವ ರೀತಿ ಇನ್ನೂ ಭಿನ್ನವಾಗಿದೆ. ಕಠಾರಿಯಿಂದ ಇರಿದು ಪೂಜೆಯ ರೂಪದಲ್ಲಿ ನರ್ತಿಸುವ ಮತ್ತು ಹರಕೆಯನೊಪ್ಪಿಸುವ ಲಕ್ಷಾಂತರ ಮಂದಿ ಭಕ್ತರೊಡನೆ ಮಾರಿದತ್ತ ಪ್ರದಕ್ಷಿಣೆ ಬಂದು ದೇವಿಯ ಪಾದಕ್ಕೆರಗಿದನು ಮುಂದುವರಿದು.

ತಳಮನುಡಿದಿಡುವ ಕಣ್ಣಂ
ಕಳೆದೇರಿಪ ಕರುಳ ತೋರಣಂಗಟ್ಟುವ ಕಾ
ಲ್ಗಳನುರಿಪಿ ನೆತ್ತರಿಂ ಕೂ
ಳ್ಗಳನಡುತಿಹ ಬೀರರೆತ್ತ ನೋಳ್ಪೊಡೆಮದರೊಳ್।

ಎತ್ತ ನೋಡಿದರೂ ಅಂಗೈಯನ್ನು ಮುರಿದಿರಿಸುವ ಕಣ್ಣುಗಳನ್ನು ಕಿತ್ತು ಹೂವಿನಂತೆ ಏರಿಸುವ, ಕರುಳನ್ನು ತೋರಣ ಕಟ್ಟುವ, ಕಾಲುಗಳನ್ನು ಉರಿಸಿ ರಕ್ತದಿಂದ ಅನ್ನವನ್ನು ಬೇಯಿಸುವ ವೀರರು

ತಾಳುಗೆಯನುರ್ಚಿ ನೆತ್ತಿಯ
ಗಾಳಂ ಗಗನದೊಳೆಳಲ್ವವಾರಿಯ ಬೀರರ್
ಪಾಳಿಯೊಳೆಸೆದರ್ ಪಾಪದ
ಜೋಳದ ಬೆಳಸಿಂಗೆ ಬೆರ್ಚುಗಟ್ಟಿದ ತೆರದಿಂ

ನೆತ್ತಿಯಗಾಳ ಅಂಗಳನ್ನು ಬೇಧಿಸಲಾಗಿ ಆಕಾಶದಲ್ಲಿ ತೂಗಾಡುವ ವೀರರ ಪಾಪವೆಂಬ ಜೋಳದ ಬೆಳೆಗೆ ಬೆದರುಗೊಂಬೆ ನಿಲ್ಲಿಸಿದಂತೆ ಕ್ರಮವಾಗಿ ಸಂಗೊಳಿಸುತ್ತಿದ್ದರು. ಮೇಲಿನ ಎರಡು ಪದ್ಯಗಳಲ್ಲಿರತಕ್ಕವು ಬಗೆಬಗೆಯ ಹರಕೆ ಸಂದಾಯದ ಆತ್ಮಬಲಿಯ ಚಿತ್ರಗಳು. ಪ್ರಾಣಿಬಲಿಯ ಚಿತ್ರಗಳಲ್ಲ. ಒಂದು ಕಡೆ ರಾಜನಾದವನು ಮನುಷ್ಯ ಜೋಡಿಗಳನ್ನು ಬಲಿಕೊಟ್ಟರೆ ಸಾಮಾನ್ಯ ಜನರು ತಮ್ಮ ವಿವಿಧ ಅಂಗಗಳನ್ನು ದೇವಿಗೆ ಅರ್ಪಿಸುವ ವಿವರ ಇಲ್ಲಿದೆ.

ಆಡುಕುರಿ ಕೋಳಿ ಕೋಣನ
ಕೂಡಿದ ಪಿಂಡೊಳರೆ ಪೇಳರೆ ಮಾರ್ದನಿಯಿಂದಂ
ಕೂಡೆ ವನಮಮ್ಮಿದುರ್ವರೆ
ಬೀಡೆಯಿನೆರ್ದೆಯೊಡೆದುದವರ ಕೋಟಲೆಗಾಗಳ್

ಕೂಡಿ ಹಾಕಿದ ಆಡು ಕುರಿ ಕೋಳಿ ಕೋಣಗಳ ಹಿಂಡು ಹೆದರಿ ಅರಚುತ್ತಿರಲು ಪ್ರತಿಧ್ವನಿಯಿಂದ ಒಡನೊಡನೆಯೆ ಕಾಡು ಅತ್ತಿತು. ಆ ಪ್ರಾಣಿಗಳ ಹಿಂಸೆಗೆ ಭೂಮಿ ಬಿರುಕಿನಿಂದ ಎದೆಯೊಡೆಯಿತು ಎಂದು ಕವಿ ಹೇಳಿದ್ದಾನೆ. ಲಕ್ಷಾಂತರ ಭಕ್ತರು ಪ್ರತಿಯೊಬ್ಬರೂ ತಂದ ಹರಕೆಯ ಪ್ರಾಣಿಗಳ ರೋದನೆ ಮಾರ್ದನಿಯನ್ನು ಕವಿ ಕಣ್ಣಿಗೆ

ಕಟ್ಟುವಂತೆ ವರ್ಣಿಸಿದ್ದಾನೆ. ಸ್ವತಃ ತಾನೇ ನೋಡಿ ವರ್ಣಿಸಿದಂತೆ ಜೀವಂತಿಕೆಯಿಂದ ಕೂಡಿದೆ ಇಲ್ಲಿಯ ವಿವರಣೆ.

ದೆಸೆ ದೆಸೆಗೆ ನರಶಿರಂ ತೆ
ತ್ತಿಸಿ ಮೆರೆದುವು ಮದಿಲೊಳಬ್ಬೆ ಪೇರಡಗಿನ ಪೆ
ರ್ಬೆಸನದೆ ಪೊರಗಣ ಜೀವ
ಪ್ರಸರಮುಮಂ ಪಲವು ಮುಖದಿನವಳೋಕಿಪವೊಲ್॥

ಮಾರಿಯು ಬಾರಿ ಮಾಂಸದ ಅತಿಯಾಸೆಯಿಂದ ಹೊರಗಿನ ಜೀವ ಸಮೂಹವನ್ನು ಹಲವು ಮುಖಗಳಿಂದ ನೋಡುತ್ತಿದ್ದಾಳೆಂಬಂತೆ ಹೊರ ಗೋಡೆಯ ಮೇಲೆ ಮನುಷ್ಯರ ತಲೆಗಳು ಎಲ್ಲ ದಿಕ್ಕುಗಳಲ್ಲಿ ನಾಟಿಕೊಂಡು ಮೆರೆಯುತ್ತಿದ್ದವು.
ಮೇಲಿನ ಎಲ್ಲಾ ಉದಾಹರಣೆಗಳೂ ಜನ್ನನ ಕಾಲದಲ್ಲಿ ಮಾರಿದೇವತೆಗೆ ಹರಕೆಯನ್ನು ಶ್ರದ್ಧೆಯಿಂದ, ಭಕ್ತಿಯಿಂದ, ಭಯದಿಂದ ಒಪ್ಪಿಸುವ ಅಂದಿನ ಸಂಸ್ಕೃತಿಯ ಒಂದು ಮುಖವನ್ನು ತೋರಿಸುತ್ತವೆ. ದೇವರಿಗೆ ಬಲಿಕೊಡುವ, ಇಂತಹ ಸಂಸ್ಕೃತಿ ಅನಾದಿಕಾಲದಿಂದಲೂ ಇತ್ತು. ಮಾರಿಯ ಜಾತ್ರೆ ಮಾರಿಗೆ ಬಲಿಕೊಡುವ ಹರಕೆ ಒಪ್ಪಿಸುವ ಈ ಎಲ್ಲವೂ ಇಂದಿಗೂ ಕಾಣಸಿಗುತ್ತವೆ ಹಾಗಾಗಿ ಇದನ್ನು ನಾನು ಸಮಕಾಲೀನ ಸಾಂಸ್ಕೃತಿಕ ಅಂಶವಾಗಿ ಗುರುತಿಸಿದ್ದೇನೆ.

**ಅಮಂಗಳ ಕನಸಿನ ಪರಿಹಾರ–ಬಲಿ–ಸಂಕಲ್ಪ ಹಿಂಸೆ**

ಅಮಂಗಳ ಕನಸಿನ ಪರಿಹಾರಕ್ಕೆ ದೇವಿಗೆ ಬಲಿಕೊಟ್ಟರೆ ಅಮಂಗಳ ಪರಿಹಾರವಾಗುತ್ತದೆ ಎಂಬ ನಂಬಿಕೆಯೂ ಈ ಕಾವ್ಯದಲ್ಲಿದೆ. ಅಮಂಗಳ ಕನಸನ್ನು ಕಂಡುದಾಗಿ ಯಶೋಧರ ತನ್ನ ತಾಯಿ ಚಂದ್ರಮತಿಗೆ ಹೇಳುತ್ತಾನೆ. ಚಂದ್ರಮತಿಯು ದೇವಿಗೆ ಬಲಿಕೊಟ್ಟರೆ ಅಮಂಗಳ ನಿವಾರಣೆಯಾಗುತ್ತದೆ ಎಂದು ಹೇಳುತ್ತಾಳೆ.
ಯಶೋಧರನು ಜೀವದಯೆ ಜೈನಧರ್ಮ, ಹಿಂಸೆಯಮೋಘಂ ಎಂದು ಬಲಿಕೊಡಲು ಒಪ್ಪದಿದ್ದಾಗ

ಆದೊಡೆಪಿಟ್ಟಿನ ಕೋಟೆಯ
ನಾದೊಡಮಿಂದೊಂದನಿಕ್ಕವೇಳ್ಪುದು ಮಿಕ್ಕಂ
ದಾ ದೇವಿಗೆನ್ನನಿಕ್ಕಿಯು
ಮೀದುರಿತಮನಿಂದು ಮಗನೆ ಪರಿಹರಿಸದಿರೆಂ

ಒಂದು ಹಿಟ್ಟಿನ ಕೋಳಿಯನ್ನಾದರೂ ಶ್ರದ್ಧೆಯಿಂದ ಬಲಿಕೊಡಲೇಬೇಕು ಮಗನೆ ಮೀರಿದ ಪಕ್ಷದಲ್ಲಿ ಆ ದೇವಿಗೆ ಇಂದು ನನ್ನನ್ನೆ ಬಲಿಕೊಟ್ಟಾದರೂ ಈ ಕೇಡನ್ನು ನಾನು ನಿವಾರಿಸದೆ ಬಿಡುವುದಿಲ್ಲ ಎಂಬಲ್ಲಿ ಜೈನರಲ್ಲಿದ್ದಿರಬಹುದಾದ ಸಂಕಲ್ಪ ಹಿಂಸೆಯನ್ನು ಕುರಿತು ಹೇಳಲಾಗಿದೆ ಹಾಗೂ ಮನುಷ್ಯನಿಗೆ ಏನಾದರೂ ಸಮಸ್ಯೆಯಾದರೆ ದೇವರ ಮೊರೆ ಹೋಗುವ ಪರಿಹಾರವಾದರೆ ಹರಕೆಯೊಪ್ಪಿಸುವ ಅಥವಾ ಪರಿಹಾರಕ್ಕಾಗಿ ಹರಕೆಯೊಪ್ಪಿಸುವ ರೀತಿ ಇಂದಿಗೂ ಇದೆ.

**ತಿಥಿಯ ಆಚರಣೆ**

ಯಶೋಧರನ ಮಗ ಯಶೋಮತಿಯು ತನ್ನ ತಂದೆ ಯಶೋಧರನ ತಿಥಿ ಆಚರಿಸುವುದು, ತಿಥಿಯಲ್ಲಿ ಆಹಾರ ಸೇವನೆ ಇವು ಪ್ರಮುಖವಾಗಿ ಕಂಡು ಬರುತ್ತವೆ. ಕೆಂಪು ಮೀನು ಶ್ರಾದ್ಧಕ್ಕೆ ಅತ್ಯುತ್ತಮವಾದುದೆಂದು ಯಶೋಮತಿ ಅರಸನು ಅದರ ಒಂದು ತುಂಡಿನಿಂದ ಶ್ರಾದ್ಧದ ಅಡುಗೆ ಮಾಡಿಸಿದನು. ಮೀನಿನ ತಲೆಯ ಕಡೆಯ ಇನ್ನೊಂದು ತುಂಡನ್ನು ನೀರಿನಲ್ಲಿರಿಸಿದಾಗ ಅದರ ಜೀವ ಏರಿಳಿಯುತ್ತಿರಲು ಜೀವಶ್ರಾದ್ಧಕ್ಕಾಗಿ ಉಳಿದುಕೊಂಡಿದ್ದ ಬ್ರಾಹ್ಮಣರು ಚೆನ್ನಾಗಿ ಊಟಮಾಡಿ, ಆಪೋಶನ ತೆಗೆದುಕೊಂಡರು.

ಪಾರ್ವರ್ ಯಶೋಧರಂ ಸುಖದಿಂದಿ
ರ್ಕಾ ನಾಕದೊಳೆಂದೂಳ್ದಪ
ರೀ ನೃಪನುಂ ನಂಬಿದಪ್ಪನಕ್ಕಟ ವಿಧಿಯೇ

ತನ್ನ ಶ್ರಾದ್ಧಕ್ಕೆ ತಾನೇ ಆಹಾರವಾಗಿ ಅರ್ಧ ಜೀವವಾಗಿರುವ ಯಶೋಧರ ಸ್ವರ್ಗದಲ್ಲಿ ಸುಖವಾಗಿರುವನೆಂದು ಹೇಳುವ ಬ್ರಾಹ್ಮಣರ ಮಾತು ವ್ಯಂಗ್ಯದಿಂದ ಕೂಡಿದಂತೆ ಕಂಡರೂ ಕವಿ ಬ್ರಾಹ್ಮಣರು ಮಾಡುವ ತಿಥಿ ಊಟ, ಅವರು ತಾವೇ ಸ್ವರ್ಗಕ್ಕೆ ಹೋಗಿ ಕಂಡುಬಂದಂತೆ ಸ್ವರ್ಗದಲ್ಲಿ ಯಶೋಧರ ಸುಖವಾಗಿರುವನು ಎಂದು ಹೇಳುವ ಮಾತು ಇಲ್ಲಿ ಮುಖ್ಯವಾಗಿದೆ. ಶ್ರಾದ್ಧಕ್ಕೆ ಬ್ರಾಹ್ಮಣರನ್ನು ಕರೆದು ತಿಥಿ ಆಚರಿಸುವ ಸಂಸ್ಕೃತಿ ಅಂದಿನಿಂದ ಇಂದಿನವರೆಗೂ ಮುಂದುವರಿದುಕೊಂಡು ಬಂದಿದೆ.
ಯಶೋಧರ ಚರಿತೆಯಲ್ಲಿ ಪ್ರಸ್ತಾಪಿತವಾಗಿರುವ ಮೇಲಿನ ಮಾತುಗಳು ಕವಿ ಹಿಂಸೆಯ ಭೀಕರತೆಯನ್ನು, ಅಹಿಂಸೆಯ ಮಹತ್ವವನ್ನು ಹೇಳಲು ಪ್ರಾಸಂಗಿಕವಾಗಿ ಬಂದಿದ್ದರೂ ಅವು ಅಂದಿನ ಸಮಕಾಲೀನ ಸಾಂಸ್ಕೃತಿಕ ವಿಚಾರಗಳನ್ನು ಹೇಳಲು ಹೊರಟಿರುವುದು ನಮ್ಮ ಗಮನಕ್ಕೆ ಬರುತ್ತದೆ. ಆ ಎಲ್ಲಾ ಸಾಂಸ್ಕೃತಿಕ ಅಂಶಗಳು ಅಲ್ಪ ಮಾರ್ಪಾಟು ಇಲ್ಲವೆ ಯಥಾವತ್ತಾಗಿ ಇಂದಿಗೂ ಆಚರಣೆಯಲ್ಲಿವೆ ಇವೆಲ್ಲವೂ ಜನರ ನಂಬಿಕೆಯ ವಿಚಾರಗಳೇ ಆಗಿದ್ದು, ನಂಬಿಕೆಯೇ ಸಂಸ್ಕೃತಿಯೂ ಆಗಿ ಮುಂದುವರಿಯುತ್ತದೆ ಎನ್ನಬಹುದು.
ಈ ಕೆಲವು ಅಂಶಗಳ ಮೂಲಕ ಜನ್ನ ಕವಿಯ ಕಾಲವಾದ ಕ್ರಿ.ಶ. ಹದಿಮೂರನೆಯ ಶತಮಾನದಲ್ಲಿ ಕನ್ನಡ ನಾಡಿನಲ್ಲಿದ್ದ ಸಂಸ್ಕೃತಿಯ ಒಂದೆರಡು ವಿಷಯಗಳನ್ನು ಇಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದೇನೆ.

**ಆಧಾರ ಗ್ರಂಥಗಳು**


1. ಸಿಪಿಕೆ–ಜನ್ನನ ಯಶೋಧರ ಚರಿತೆ, ಖಖ ಇಜುಣುಠಟಿ, ಚೇತನ್ ಬುಕ್ ಹೌಸ್, ಮೈಸೂರು–1997.
2. ರಂ.ಶ್ರೀ.ಮುಗಳಿ ಕನ್ನಡ ಸಾಹಿತ್ಯ ಚರಿತ್ರೆ 15ಣಜ ಇಜುಣುಠಟಿ, ಗೀತಾ ಬುಕ್‌ಹೌಸ್, ಮೈಸೂರು–2008.
3. ಕೀರ್ತಿನಾಥ ಕುರ್ತಕೋಟಿ–ಕನ್ನಡ ಸಾಹಿತ್ಯ ಸಂಗಾತಿ ಖಖ ಇಜುಣುಠಟಿ, ಕನ್ನಡ ವಿವಿ, ಹಂಪಿ–1997.